# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ನಂ:ವಿಪತ್ತು ನಿರ್ವಹಣೆ:ಸಿಆರ್:01/2021-22 ದಿನಾಂಕ:21/05/2021.

## ಆದೇಶ

ಕೋವಿಡ್-19 ರೋಗ ತಡೆ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 158 ಟಿಎನ್‌ಆರ್ 2020 ದಿನಾಂಕ:20-04-2021ರಲ್ಲಿ ದಿನಾಂಕ:21-4-2021ರಿಂದ ಅನ್ವಯಿಸುವಂತೆ ಕೋವಿಡ್-19 ರೋಗ ತಡೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ತದನಂತರ ದಿನಾಂಕ:21-4-2021, 23-4-2021 ಮತ್ತು ದಿನಾಂಕ:25-4-2021ರಲ್ಲಿ ಹೆಚ್ಚುವರಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಕೋವಿಡ್-19 ಸೋಂಕು ತಡೆಗಾಗಿ ರಾಜ್ಯ ಸರ್ಕಾರವು ಆದೇಶ ಸಂಖ್ಯೆ ದಿನಾಂಕ:26-4-2021ರಲ್ಲಿ ಕೋವಿಡ್-19 ರೋಗ ತಡೆ ನಿಯಂತ್ರಣಕ್ಕಾಗಿ ದಿನಾಂಕ:27-04-2021ರ ರಾತ್ರಿ 9-00ಗಂಟೆಯಿಂದ ದಿನಾಂಕ:12-05-2021ರ ಮುಂಜಾನೆ 6-00ವರೆಗೆ ಚಾಲ್ತಿಯಲ್ಲಿರುವಂತೆ ಕೋವಿಡ್-19 ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 158 ಟಿಎನ್‌ಆರ್ 2020, ದಿನಾಂಕ:7-5-2021 ಮತ್ತು ದಿ:21-05-2021 ಆದೇಶದಲ್ಲಿ ಕೋವಿಡ್-19 ರೋಗ ತಡೆ ಸಂದರ್ಭದಲ್ಲಿನ ಕ್ರಮಗಳ ಬಗ್ಗೆ ವಿವರಗಳನ್ನು ನೀಡಿದ್ದು, ಈ ಆದೇಶವು ಯಾಥಾವತ್ತು ಜಿಲ್ಲೆಯಲ್ಲಿ ದಿನಾಂಕ:24-5-2021ರ ಬೆಳಿಗ್ಗೆ 6.00ಗಂಟೆಯಿಂದ ಅನ್ವಯವಾಗುವಂತೆ ದಿನಾಂಕ:07-6-2021ರ ಮುಂಜಾನೆ 6-00ಗಂಟೆಯವರೆಗೆ ಜಾರಿಯಲ್ಲಿರುತ್ತದೆ.

ಮುಂದುವರೆದು ಪ್ರಸ್ತುತ ಒಂದು ವಾರದಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಪಾಸಿಟಿವ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿ ಸಾಗುತ್ತಿದ್ದು, ಸೋಂಕು ವೇಗವಾಗಿ ಒಬ್ಬರಿಂದ ಒಬ್ಬರಿಗೆ ಹರಡುತ್ತಿರುತ್ತದೆ. ಆದ್ದರಿಂದ ಸರ್ಕಾರದ ದಿನಾಂಕ:07/05/2021 ಹಾಗೂ ದಿ:21/05/2021ರ ಆದೇಶದ ಜೊತೆಯಲ್ಲಿ ಹೆಚ್ಚುವರಿಯಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ದಿನಾಂಕ:26/05/2021 ರಿಂದ ದಿ:07/06/2021 ರವರೆಗೆ ಈ ಕೆಳಕಂಡಂತೆ ಅಗತ್ಯ ಸೇವೆಗಳಾದ ವೈದ್ಯಕೀಯ ತುರ್ತು ಸೇವೆಗಳು, ತುರ್ತು ಸೇವೆ ಒದಗಿಸುವ ಇಲಾಖೆಗಳು, ಔಷಧಿ ಅಂಗಡಿಗಳು, ಎಲ್ಲಾ ಆಸ್ಪತ್ರೆಗಳು, ಪೆಟ್ರೋಲ್ ಬಂಕ್‌ಗಳು, ಹಾಲಿನ ಬೂತ್‌ಗಳು, ದಿನಪತ್ರಿಕೆ ವಿತರಣೆ, ಎಲ್ಲಾ ರೀತಿಯ ಸರಕು ಸಾಗಣೆ ವಾಹನಗಳು, ಆಮ್ಲಜನಕ ಸೇವೆಗಳು, ಇ-ಕಾಮರ್ಸ್ ಸೇವೆಗಳು, ಹೋಟೆಲ್‌ಗಳಲ್ಲಿ ತಿಂಡಿ, ಊಟ ಪಾರ್ಸಲ್ ಪಡೆಯುವ ಸೇವೆಗಳನ್ನು ಹೊರತುಪಡಿಸಿ ಸಂಪೂರ್ಣ ಲಾಕ್‌ಡೌನ್ ವಿಧಿಸಿರುತ್ತೇನೆ.

| ಕ್ರ.ಸಂ. | ಸಂಪೂರ್ಣ ಲಾಕ್‌ಡೌನ್ ವಿಧಿಸಿರುವ ದಿನಗಳು | ಸಂಪೂರ್ಣ ಲಾಕ್‌ಡೌನ್‌ನಿಂದ ವಿನಾಯಿತಿ ನೀಡಿರುವ ದಿನಗಳು | ಸಂಪೂರ್ಣ ಲಾಕ್‌ಡೌನ್ ವಿಧಿಸಿರುವ ದಿನಗಳಂದು ಲಭ್ಯವಿರುವ ಸೇವೆಗಳು | ಸಂಪೂರ್ಣ ಲಾಕ್‌ಡೌನ್ ಹೊರತಾದ ದಿನಗಳಲ್ಲಿನ ಚಟುವಟಿಕೆಗಳು |
|---|---|---|---|---|
| 1 | ದಿ:27/05/21<br>ದಿ:29/05/21<br>ದಿ:30/05/21<br>ದಿ:01/06/21<br>ದಿ:03/06/21<br>ದಿ:05/06/21<br>ದಿ:06/06/21 | ದಿ:26/05/21<br>ದಿ:28/05/21<br>ದಿ:31/05/21<br>ದಿ:02/06/21<br>ದಿ:04/06/21 | ಹಾಲಿನ ಉತ್ಪನ್ನಗಳ ಮಾರಾಟ (ಬೆ:06 ರಿಂದ 10) ವೈದ್ಯಕೀಯ ತುರ್ತು ಸೇವೆಗಳು, ಎಲ್ಲಾ ಆಸ್ಪತ್ರೆ, ಮೆಡಿಕಲ್ಸ್, ಪೆಟ್ರೋಲ್ ಬಂಕ್, ಇ-ಕಾಮರ್ಸ್, ತಿಂಡಿ/ಊಟ ಪಾರ್ಸಲ್ ಸೇವೆಗಳು, ಗೂಡ್ಸ್ ವಾಹನಗಳ ಸಂಚಾರ, ದಿನಸಿ ಪಾರ್ಸಲ್ ಸೇವೆಗಳು, ಸರ್ಕಾರದ ದಿ:07/05/2021 ಮತ್ತು ದಿ:21/05/2021, ಇನ್ನಿತರೆ ಹೆಚ್ಚುವರಿ ಆದೇಶಗಳಲ್ಲಿ ಉಲ್ಲೇಖಿಸಿರುವ ನಿರಂತರ ಉತ್ಪಾದನಾ ಕೈಗಾರಿಕೆ/ಉದ್ದಿಮೆಗಳು ಮಾತ್ರ. | ಸರ್ಕಾರದ ದಿ:07/05/2021 ಮತ್ತು ದಿ:21/05/2021, ಇನ್ನಿತರೆ ಹೆಚ್ಚುವರಿ ಆದೇಶಗಳಲ್ಲಿ ಬೆ:06 ರಿಂದ 10 ಗಂಟೆಯವರೆಗೆ ನಿರ್ಬಂಧಿಸಿರುವ ಚಟುವಟಿಕೆಗಳನ್ನು ಹೊರತುಪಡಿಸಿ ಉಳಿದ ಚಟುವಟಿಕೆಗಳಿಗೆ ಮಾತ್ರ ಅವಕಾಶವಿರುತ್ತದೆ. |

ಈ ಆದೇಶದ ಜೊತೆಯಲ್ಲಿ ಈಗಾಗಲೇ ಸಿ.ಆರ್.ಪಿ.ಸಿ. 144 ರಡಿಯಲ್ಲಿ ಹೊರಡಿಸಿರುವ ನಿಷೇಧಾಜ್ಞೆ ಆದೇಶವು ಸಹ ಜಾರಿಯಲ್ಲಿರುತ್ತದೆ.

ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ 2005 ರಡಿ ಹಾಗೂ ಭಾರತೀಯ ದಂಡ ಸಂಹಿತೆ ಕಲಂ 188 ರಡಿ ಶಿಸ್ತು ಕ್ರಮಕೈಗೊಳ್ಳಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಿದೆ.

(ಕವಿತಾ ಎಸ್ ಮನ್ನಿಕೇರಿ)
ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಪ್ರತಿಯನ್ನು

1. ಪೊಲೀಸ್ ವರಿಷ್ಠಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರಿಗೆ ರವಾನಿಸುತ್ತಾ ಮೇಲ್ಕಂಡ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕೋರಿದೆ.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಚಿತ್ರದುರ್ಗ ಜಿಲ್ಲೆ ಇವರು ಗ್ರಾಮೀಣ ಭಾಗದಲ್ಲಿ ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
3. ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ ಇವರಿಗೆ ಕ್ರಮಕ್ಕಾಗಿ
4. ಜಿಲ್ಲೆಯ ಎಲ್ಲಾ ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
5. ಇತರೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ